# ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ, ರಾಷ್ಟ್ರೀಯ ಹೆದ್ದಾರಿ –4, ಶಿಗ್ಗಾವಿ ತಾ. ಹಾವೇರಿ ಜಿ. – 581 205


## ಅಧಿಸೂಚನೆ

ಕ.ಜಾ.ವಿ.ವಿ.ಆವಿ./ಮನ್ನಣೆ/ಕ್ರಮಾಂಕ:2022–23/181 ದಿನಾಂಕ:20.06.2022

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಜ್ಞಾನವನ್ನು ವಿಸ್ತರಿಸುವ ಹಾಗೂ ಜಾನಪದ ಸಂರಕ್ಷಣೆ ಸಂವರ್ಧನೆ ಪ್ರಚಾರ–ಪ್ರಸಾರ ಈ ಉದ್ದೇಶವನ್ನು ಹೊಂದಿರುವ ವಿಶ್ವವಿದ್ಯಾಲಯವಾಗಿದೆ. ಜಾನಪದ ವಿಶ್ವವಿದ್ಯಾಲಯವು ಈ ಕೆಳಗಿನ ವಿವಿಧ ಸ್ನಾತಕೋತ್ತರ ಡಿಪ್ಲೊಮಾ ಮತ್ತು ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು 2022–23ನೇ ಸಾಲಿನಲ್ಲಿ ನಡೆಸಲು ವಿಶ್ವವಿದ್ಯಾಲಯದಿಂದ ಮಾನ್ಯತೆ ಕೋರಿ ಅರ್ಜಿ ಸಲ್ಲಿಸುವಂತೆ ಅನುದಾನಿತ/ ಅನುದಾನ ರಹಿತ ಸರ್ಕಾರಿ, ಶಾಲಾ–ಕಾಲೇಜುಗಳು ವಿಶ್ವವಿದ್ಯಾಲಯ ಮತ್ತು ಸಂಘ ಸಂಸ್ಥೆಗಳಿಂದ ಶೈಕ್ಷಣಿಕ ಸಂಸ್ಥೆಗಳು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ. | ಕೋರ್ಸ್‌ಗಳು | ವಿಷಯ |
|---|---|---|
| 1 | ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್ | ಜನಪದ ಮಹಾಕಾವ್ಯ, ಪಾರಂಪರಿಕ ಹೈನುಗಾರಿಕೆ, ಮತ್ತು ಪಾರಂಪರಿಕ ತೋಟಗಾರಿಕೆ, |
| 2 | ಡಿಪ್ಲೊಮಾ ಕೋರ್ಸ್ | ಬಯಲಾಟ (ಮೂಡಲಪಾಯ), ಯಕ್ಷಗಾನ ಬಯಲಾಟ ಮತ್ತು ಸೌಂದರ್ಯ ಶಾಸ್ತ್ರ, ಹಚ್ಚೆ, ಪಾರಂಪರಿಕ ಸಮರ ಕಲೆ, ಮತ್ತು ಯೋಗ |
| 3 | ಸರ್ಟಿಫಿಕೇಟ್ ಕೋರ್ಸ್‌ಗಳು | ದೊಡ್ಡಾಟ, ಕಸೂತಿ ಕಲೆ, ಜನಪದ ಪ್ರವಾಸೋದ್ಯಮ, ಜನಪದ ಗೀತ ಸಂಪ್ರದಾಯ, ಡೊಳ್ಳು ಕುಣಿತ, ಜನಪದ ನೃತ್ಯ, ಬಿದರಿ ಕಲೆ, ಬೀಸು ಕಂಸಾಳೆ, ಸಮರ ಕಲೆ, ತೊಗಲು ಗೊಂಬೆಯಾಟ, ಯುವ ಜನಸೇವೆ ಮತ್ತು ಗ್ರಾಮೀಣ ಕ್ರೀಡೆಗಳು, ಸಮರ ಕಲೆಗಳು ಮತ್ತು ಆತ್ಮರಕ್ಷಣೆ, ಚರ್ಮವಾದ್ಯಗಳು, ಯೋಗ–ಸರ್ಟಿಫಿಕೇಟ್ ಕೋರ್ಸ್ |

**ಸೂಚನೆಗಳು:**

1. ಮಾನ್ಯತೆ ಪಡೆಯಲು ಬಯಸಿದ ಸಂಸ್ಥೆಯವರು ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.janapadauniversity.ac,in ನಲ್ಲಿ ಡೌನ್‌ಲೋಡ್ ಮಾಡಿ, ಅರ್ಜಿಯಲ್ಲಿರುವಂತೆ ಮಾಹಿತಿಗಳನ್ನು ಭರ್ತಿ ಮಾಡಿ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ದಿನಾಂಕ: 11.07.2022 ರೊಳಗಾಗಿ ಕುಲಸಚಿವರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಇವರ ಹೆಸರಿಗೆ ಸಲ್ಲಿಸಬೇಕು.
2. ಹೊಸದಾಗಿ ಮಾನ್ಯತೆಗಾಗಿ ಅರ್ಜಿ ಸಲ್ಲಿಸುವ ಸಂಸ್ಥೆಯ ಮಾನ್ಯತೆ ಶುಲ್ಕ ವೆಚ್ಚ 30,000/– (ಮೂವತ್ತು ಸಾವಿರ ರೂ.ಗಳು ಮಾತ್ರ)ಗಳನ್ನು ಅರ್ಜಿಯೊಂದಿಗೆ ಡಿ.ಡಿ. ಮೂಲಕ **ಹಣಕಾಸು ಅಧಿಕಾರಿಗಳು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ** ಇವರ ಹೆಸರಿನಲ್ಲಿ **ಎಸ್.ಬಿ.ಐ. ಬ್ಯಾಂಕ್, ಶಿಗ್ಗಾವಿ ಶಾಖೆಗೆ** ಸಂದಾಯವಾಗುವಂತೆ ಅರ್ಜಿಯೊಂದಿಗೆ ಪಾವತಿಸಬೇಕು.
3. 2018–19, 2019–20, 2020–21 ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ವಿವಿಧ ಸರ್ಟಿಫಕೇಟ್ ಹಾಗೂ ಡಿಪ್ಲೊಮಾ ಕೋರ್ಸುಗಳನ್ನು ನಡೆಸಲು ಮಾನ್ಯತೆ ಪಡೆದಿರುವ ಸಂಸ್ಥೆಗಳು, ಮಾನ್ಯತೆ ಮುಂದುವರಿಸಿ ಕೋರ್ಸುಗಳನ್ನು ನಡೆಸಲು ಬಯಸಿದಲ್ಲಿ ತಮ್ಮ ಸಂಸ್ಥೆಯನ್ನು ಪುನರ್ ಪರಿಶೀಲಿಸಲು ನವೀಕರಣ ವೆಚ್ಚ ವೆಚ್ಚ ರೂ. 15,000/– (ಹದಿನೈದು ಸಾವಿರ ರೂ.ಗಳು ಮಾತ್ರ) ಗಳನ್ನು ವಿಶ್ವವಿದ್ಯಾಲಯಕ್ಕೆ ಅರ್ಜಿಯೊಂದಿಗೆ ಡಿ.ಡಿ. ಮೂಲಕ **ಹಣಕಾಸು ಅಧಿಕಾರಿಗಳು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ** ಇವರ ಹೆಸರಿನಲ್ಲಿ **ಎಸ್.ಬಿ.ಐ. ಬ್ಯಾಂಕ್, ಶಿಗ್ಗಾವಿ ಶಾಖೆಗೆ** ಸಂದಾಯವಾಗುವಂತೆ ಅರ್ಜಿಯೊಂದಿಗೆ ಪಾವತಿಸಬೇಕು.
4. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮಾನ್ಯ ಕುಲಸಚಿವರ ಕಛೇರಿಗೆ ಖುದ್ದಾಗಿ ಭೇಟಿ ನೀಡಿ ವಿಚಾರಿಸಬಹುದು ಅಥವಾ ದೂರವಾಣಿ ಸಂಖ್ಯೆ: 8762600898, 9448789295, 0836–2255180 ಗಳನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದು.

ಆದೇಶದ ಮೇರೆಗೆ,

20/6/22

ಕುಲಸಚಿವರು